ಕೆ. ಯಾಲಕ್ಕಿಗೌಡ
ನಿರ್ದೇಶಕರು, (ಪಂಚಾಯತ್ ರಾಜ್)

K. YALAKKI GOWDA
Director, (Panchayat Raj)

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
Karnataka Government Secretariat
Rural Development & Panchayat Raj Department

ಅ.ಸ. ಪತ್ರ ಸಂ.ಗ್ರಾಅಪ 139 ಜಿಪಸ 2012 ದಿನಾಂಕ 24.01.2014

ಮಾನ್ಯರೆ,

ವಿಷಯ:2012-13 ಹಾಗೂ 2013-14 ನೇ ಸಾಲಿನ ರಾಜೀವ್ ಗಾಂಧಿ ಪಂಚಾಯತಿ ಸಶಕ್ತೀಕರಣ ಅಭಿಯಾನ ಯೋಜನೆಯ ಅನುಷ್ಠಾನದಲ್ಲಿ ಅನುದಾನಗಳನ್ನು ಬಿಡುಗಡೆ ಮಾಡಿರುವ ಬಗ್ಗೆ.

ಉಲ್ಲೇಖ:1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 139 ಜಿಪಸ 2012(ಪಿ-3) ದಿನಾಂಕ 09.01.2014
2. ಸಮಸಂಖ್ಯೆಯ ಸರ್ಕಾರದ ಆದೇಶ ದಿನಾಂಕ 16.01.2014.
3. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 132 ಜಿಪಸ 2013 ದಿನಾಂಕ 16.01.2014.
4. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 139 ಜಿಪಸ 2012(ಪಿ-3) ದಿನಾಂಕ 18.01.2014.

ಉಲ್ಲೇಖ(1)ರ ಸರ್ಕಾರದ ಆದೇಶದ ಮೂಲಕ 2013-14ನೇ ಸಾಲಿನ ರಾಜೀವ್ ಗಾಂಧಿ ಪಂಚಾಯತಿ ಸಶಕ್ತೀಕರಣ ಅಭಿಯಾನ ಯೋಜನೆಯ ಅನುಷ್ಠಾನದಲ್ಲಿ ರಾಜ್ಯದ 418 ಗ್ರಾಮ ಪಂಚಾಯತಿಗಳಿಗೆ ತಲಾ 3 ಲಕ್ಷ ರೂ.ಗಳನ್ನು ದುರಸ್ತಿ ಹಾಗೂ ಉನ್ನತೀಕರಣ ಮಾಡುವ ಸಲುವಾಗಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಉಲ್ಲೇಖ(2)ರ ಸರ್ಕಾರದ ಆದೇಶದ ಮೂಲಕ 2012-13ನೇ ಸಾಲಿನ ಐ.ಇ.ಸಿ ಅನುದಾನವನ್ನು ಸೇರಿಸಿ 2013-14ನೇ ಸಾಲಿನ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಮಾಹಿತಿ, ಶಿಕ್ಷಣ ಹಾಗೂ ಸಂವಹನ ಕಾರ್ಯಕ್ರಮಗಳಿಗೆ ತಲಾ 1195/-ರೂ.ಗಳ ಅನುದಾನವನ್ನು ಬಿಡುಗಡೆಗೊಳಿಸಿ ಆದೇಶಿಸಲಾಗಿದೆ.

ಉಲ್ಲೇಖ(3) ಸರ್ಕಾರದ ಆದೇಶದ ಮೂಲಕ ಸಿ.ಎಸ್.ಎ.ಡಿ ದತ್ತಾಂಶಗಳ (2010-11) ಪ್ರಕಾರ ಸ್ವಂತ ಸಂಪನ್ಮೂಲ ಕೊರತೆ ಎದುರಿಸುತ್ತಿರುವ ರಾಜ್ಯದ 600 ಗ್ರಾಮ ಪಂಚಾಯತಿಗಳಿಗೆ ತಲಾ 50,000/-ಗಳಂತೆ ಅನುದಾನವನ್ನು ಆದೇಶಿಸಲಾಗಿದೆ.

ಉಲ್ಲೇಖ(4) ಸರ್ಕಾರದ ಆದೇಶದ ಮೂಲಕ 2013-14ನೇ ಸಾಲಿನ ರಾಜ್ಯದಲ್ಲಿ ಹೊಸದಾಗಿ ಸೃಜನೆಯಾಗಿರುವ ಜಲಾಲಪುರ ಹಾಗೂ ಗಾಂಧಿನಗರ ಗ್ರಾಮ ಪಂಚಾಯತಿಗಳಿಗೆ ತಲಾ 15 ಲಕ್ಷ ರೂ.ಗಳನ್ನು ಬಿಡುಗಡೆಗೊಳಿಸಿ ಆದೇಶಿಸಿದೆ.

ಉಲ್ಲೇಖಗಳ ಆದೇಶಗಳ ಮೂಲಕ ಬಿಡುಗಡೆಗೊಳಿಸಲಾದ ಅನುದಾನಗಳ ಬಗ್ಗೆ ಪಂಚಾಯತಿವಾರು ಮಾಹಿತಿಯನ್ನು ಗ್ರಾ.ಅ&ಪಂ.ರಾಜ್ ಇಲಾಖೆಯ ಗಣಕ ಜಾಲದಲ್ಲಿ (http://www.rdpr.kar.nic.in) ಲಭ್ಯಗೊಳಿಸಲಾಗಿದ್ದು ಮಾಹಿತಿಯ ಪ್ರಯೋಜನ ಪಡೆಯಬಹುದು. ಅಲ್ಲದೇ ಆದೇಶದ ಪ್ರತಿಗಳನ್ನು ಕಳುಹಿಸಿ ಕೊಡಲಾಗಿದೆ. ಅದೇಶದ ಪ್ರತಿಗಳನ್ನು ಆಯಾ ಪಂಚಾಯತ್ ರಾಜ್ ಸಂಸ್ಥೆಗಳಿಗೆ ತಲುಪಿಸುವ ಜವಾಬ್ದಾರಿ ತಮ್ಮದಾಗಿರುತ್ತದೆ. ಪಂಚಾಯತ್ ರಾಜ್ ಮಂತ್ರಾಲಯದ ಕಟ್ಟುನಿಟ್ಟಿನ ಸೂಚನೆಗಳಂತೆ ರಾಜೀವ್ ಗಾಂಧಿ ಪಂಚಾಯತಿ ಸಶಕ್ತೀಕರಣ ಅಭಿಯಾನ ಯೋಜನೆಯ ಅನುದಾನಗಳನ್ನು ಪಂಚಾಯತಿಗಳ ಬ್ಯಾಂಕ್ ಖಾತೆಗಳಿಗೆ ತ್ವರಿತವಾಗಿ ವರ್ಗಾವಣೆಗೊಳಿಸಬೇಕಾಗಿರುತ್ತದೆ.

ರಾಜ್ಯ ಸರ್ಕಾರದ ವತಿಯಿಂದ ದೇನಾ ಬ್ಯಾಂಕಿನ ಇಂದಿರಾ ನಗರ ಶಾಖೆಯಲ್ಲಿ ತೆರೆಯಲಾಗಿರುವ ಉಳಿತಾಯ ಖಾತೆಯಿಂದ ಮುಖ್ಯ ಕಾರ್ಯನಿವಾಹಕ ಅಧಿಕಾರಿಗಳಿಂದ ದೃಢೀಕರಿಸಿದ ಗ್ರಾಮ ಪಂಚಾಯತಿಯ 13ನೇ ಹಣಕಾಸು ಆಯೋಗ ಅನುದಾನದ ಖಾತೆಗೆ 24 ಗಂಟೆಯೊಳಗಾಗಿ ಎನ್.ಇ.ಎಫ್.ಟಿ. ಮೂಲಕ ಆನ್-ಲೈನ್ ವರ್ಗಾವಣೆ ಮಾಡಲು

ಬಹುಮಹಡಿ ಕಟ್ಟಡ, 3ನೇ ಮಹಡಿ, ಬೆಂಗಳೂರು - 560 001 M.S. Building, 3rd Floor, Bangalore - 560 001
Tele: 080-2235 3925 / 2203 2533 Fax : 080-2235 3925 e-mail : pr.kar@nic.in

ಸೂಚಿಸಲಾಗಿದೆ. ಅನುದಾನವು ಗ್ರಾಮ ಪಂಚಾಯತಿಗೆ ತಲುಪಿದ ಕೂಡಲೇ ಪ್ರತ್ಯೇಕವಾಗಿ "ರಾಜೀವ್ ಗಾಂಧಿ ಪಂಚಾಯತಿ ಸಶಕ್ತೀಕರಣ ಅಭಿಯಾನ್(ಆರ್.ಜಿ.ಪಿ.ಎಸ್.ಎ)" ಯೋಜನೆಯ ಹೆಸರಿನಲ್ಲಿ ಪ್ರತ್ಯೇಕ ಬ್ಯಾಂಕ್ ಖಾತೆ ತೆರೆಯುವುದು. ಪ್ರತ್ಯೇಕ ಬ್ಯಾಂಕ್ ಖಾತೆ ತೆರೆದಿರುವುದರ ಬಗ್ಗೆ ಮಾಹಿತಿಯನ್ನು ಕೂಡಲೇ ಕಡ್ಡಾಯವಾಗಿ ಸರ್ಕಾರಕ್ಕೆ ಸಲ್ಲಿಸುವುದು. ಇದು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳಬೇಕಾದಲ್ಲಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪಾತ್ರ ಬಹಳ ಮುಖ್ಯ.

ಉಲ್ಲೇಖಗಳ ಆದೇಶದ ಮೂಲಕ ಬಿಡುಗಡೆಗೊಳಿಸಲಾದ ಅನುದಾನವು ತಮ್ಮ ವ್ಯಾಪ್ತಿಯ ಗ್ರಾಮ ಪಂಚಾಯತಿಗಳಿಗೆ ದಿನಾಂಕ 25.01.2014 (two days for NEFT) ರೊಳಗಾಗಿ ಜಮೆಯಾಗಿರುತ್ತದೆ. ದಿನಾಂಕ 25.01.2013 ರಂದು ಅನುದಾನ ವರ್ಗಾವಣೆಯಾಗಿರುವ ಬಗ್ಗೆ ಖಾತ್ರಿಪಡಿಸಿಕೊಂಡು ಈ ಬಗ್ಗೆ ದೃಢೀಕರಣವನ್ನು 48 ಗಂಟೆಯೊಳಗಾಗಿ ಗ್ರಾಮ ಪಂಚಾಯತಿವಾರು ಈ ಪತ್ರಕ್ಕೆ ಲಗತ್ತಿಸಿದ ನಮೂನೆಯಲ್ಲಿ ತಯಾರಿಸಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ದೃಢೀಕರಿಸಿ, pr.kar@nic.in, secyrdpr@gmail.com, rdpr.info@gmail.com, sozp.11@gmail.com ಇ-ಮೇಲ್ ವಿಳಾಸಗಳಿಗೆ ತ್ವರಿತವಾಗಿ ಸ್ಕ್ಯಾನ್ ಮಾಡಿ ದಿನಾಂಕ 30.08.2013ರ ಸಂಜೆಯೊಳಗಾಗಿ ವರದಿ ಕಳುಹಿಸಿಕೊಡುವಂತೆ ತಮಗೆ ಸೂಚಿಸಲಾಗಿದೆ.

ಉಲ್ಲೇಖ(1) ಮತ್ತು (4)ಗಳ ಆದೇಶಗಳ ಮೂಲಕ ಬಿಡುಗಡೆಗೊಳಿಸಲಾದ ಅನುದಾನಗಳಿಗೆ ಸಂಬಂಧಿಸಿದಂತೆ ಜನವರಿ 15ಕ್ಕೆ, ಏಪ್ರಿಲ್ 15ಕ್ಕೆ, ಜುಲೈ 15ಕ್ಕೆ ಹಾಗೂ ಅಕ್ಟೋಬರ್ 15ಕ್ಕೆ ಅನುಬಂಧದಲ್ಲಿ ಲಗತ್ತಿಸಿರುವಂತೆ ಪ್ರಗತಿ ವರದಿಯನ್ನು ಕಡ್ಡಾಯವಾಗಿ ನೀಡುವುದು. ಕಾಲಮಿತಿಯಲ್ಲಿ ಅನುದಾನ ಜಮೆಯಾದ ಬಗ್ಗೆ ದೃಢೀಕರಣ/ಮಾಹಿತಿಯನ್ನು ನೀಡಲು ವಿಳಂಬ ಮಾಡಿದಲ್ಲಿ, ತಡವಾಗಿ ಸಲ್ಲಿಸಿರುವ ಹಾಗೂ ಮುಂದಿನ ಆಗುಹೋಗುಗಳಿಗೆ ಆಯಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಹೊಣೆಗಾರರನ್ನಾಗಿಸಲಾಗುವುದು.

**ಆದರಗಳೊಡನೆ,**

ತಮ್ಮ ವಿಶ್ವಾಸಿ,

24/1/14

**ಎಲ್ಲಾ ಜಿಲ್ಲಾ ಪಂಚಾಯತಿಗಳಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.**

ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ- ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ
ಎಲ್ಲಾ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ- ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ.

Release Orders No.RDP:139:ZPS:2012(P-3), Dt:09.01.2014 and 18.01.2014
Releas order No. RDP 139 ZPS 2012, Dated: 16.01.2014.
Releas order No. RDP 132 ZPS 2013, Dated : 16.01.2014.
Rajiv Gandhi Panchayat Sashaktikaran Abhiyan for the year 2013-14

| Sl. No | District | Taluk | GP Name | Bank Name | A/C No | IFSC Code | Amount | Time & Date Credited to the Bank A/C | Remarks |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |

Signature of the Chief Executive Officer

**Progress Report, RGPSA**

**Report due on 15th January, 15th April, 15th July and 15th October**

**Progress on Activities**

| GP Building Repairs | | | | | | |
|---|---|---|---|---|---|---|
| Type of work | No. of GPs in which Sanctioned | Amount Approved | Implementing Agency | Whether funds transfer to Implementing Agency | No. of GPs in which works completed (please attach list) | Expenditure till date |
| | | | | | | |
| | | | | | | |
| | | | | | | |

**Signature of the Chief Executive Officer**

**Progress Report, RGPSA**

**Report due on 15th January, 15th April, 15th July and 15th October**

**Progress on Activities**

| 1. | New GP Building | Number Sanctioned | Funds Sanctioned | Number for which funds are transferred to implementing agency. | Number for which work has begun and is in progress | Number Completed | Expenditure till reporting date |
|---|---|---|---|---|---|---|---|
| | Unit Cost-1 (Rs. ________) | | | | | | |
| | Unit Cost-2 (Rs. ________) | | | | | | |
| | Total | | | | | | |

**Signature of the Chief Executive Officer**